ಮುಳ್ಳುಕಂಟಿ ಗಿಡಗಳ ಸಹವಾಸ ಅಷ್ಟು ಸುಲಭಿಲ್ಲ, ತಗಿ' ಕಥಾನಾಯಕ ಅಂದ. ಮುಂದುವರೆದು, 'ಈ ಊರಲ್ಲಿ ಯಾರೂ ಗುಲಾಬಿ ಹೂವುಗಳನ್ನು ಕೊಯ್ಯಲು ಟ್ರೈನಿಂಗ್ ಕೊಡಲ್ಲ ಅಮ್ಮಣ್ಣಿ, ಇನ್ನು ಹೇಗೆ ಕೊಯ್ಯಬೇಕು?' ಎಂದ. 'ಗುಲಾಬಿ ಹೂವುಗಳನ್ನು ಕೊಯ್ಯುವುದು ಹೀಗಾ, ನೋಡಿಲ್ಲಿ ಎದೆ ಹೆಂಗೆ ಕೊಯ್ಯಕೊಂಡು ಹೋಗಿದೆ. ಹೂವಿಗೆ ಮಾರು ಹೋದರೆ ಹಿಂಗೆ ಆಗೋದು, ಅವುಗಳ ಸುತ್ತ ಇರೋ ಮುಳ್ಳುಗಳ ಬಗ್ಗೆ ಗ್ಯಾನ ಇರಬೇಕು ವಸಿ' ಅಂದಳು. ತನ್ನ ವೇಲಿನ ಕಾಲುಭಾಗವನ್ನು ಹರಿದು ಗುಲಾಬಿ ಮುಳ್ಳುಗಳಿಂದ ಸೀಳಿ ರಕ್ತ ಹರಿಯುತ್ತಿದ್ದ ಎದೆಯನ್ನು ಒರೆಸಿ, ರಕ್ತ ಒಸರುತ್ತಿದ್ದ ಜಾಗವನ್ನು ಒತ್ತಿದಳು. ರಕ್ತ ಒಸರುತ್ತಲೇ ಇತ್ತು. ಅವಳು ಬಗ್ಗಿ ಒರೆಸುತ್ತಿದ್ದಳು. ಅವಳ ಬಿಸಿ ಉಸಿರು ಅವನ ನರಗಳ ಒಳಗೆ ಇಳಿದು ವಿದ್ಯುತ್ ಸಂಚಲನವನ್ನೇ ಉಂಟು ಮಾಡುತ್ತಿತ್ತು. ಅವಳು ಬಾಗಿದ್ದುದರಿಂದ, ಅವಳೆದೆಯ ಸೀಳು ಸೀದ ಅವನ ಕಣ್ಣುಗಳೊಳಗೆ ನೆಟ್ಟುಕೊಂಡಿತು. ಆಗ ಎಲ್ಲೂ ಇಲ್ಲದ ಗಾಳಿ ಗುಲಾಬಿ ತೋಟದ ಮೇಲೆ. ಒಣಗಲು ಹಾಕಿದ ತಂತಿಯಮೇಲಿನ ವಸ್ತ್ರಗಳು ಗಾಳಿಗೆ ಅಲೆಯಾಗಿ ಹಾರಾಡುವಂತೆ ಹೂವುಗಳಿಂದ ತುಂಬಿಕೊಂಡಿದ್ದ ಗುಲಾಬಿ ಗಿಡಗಳು. ಅರಳಿ ನಳನಳಿಸುತ್ತಿದ್ದ ಕಡುಗೆಂಪು ಗುಲಾಬಿ ಹೂವುಗಳು. ಗಾಳಿಗೋ ಅಥವಾ ಮೈಯ ಬಿಸಿಗೋ ಅವರ ವಸ್ತ್ರಗಳು ಹರಿದು ಆಕಾಶದಲ್ಲಿ ಗಾಳಿಪಟ. ಎದೆಯ ಮೇಲಿನ ಹೆಪ್ಪುಗಟ್ಟದ ರಕ್ತ ಜಲವರ್ಣ ಚಿತ್ರ. ಇಬ್ಬರಿಗೂ ಗುರುತ್ವವಿಲ್ಲ, ಮತ್ತು ಗುರುತ್ವಾಕರ್ಷಣೆಯೂ. ಅವರ ವಸ್ತ್ರಗಳಂತೆ ಅವರೂ ಈಗ. ನೆಲದ ಭಾರದ ಹಂಗಿಲ್ಲ. ಹೂವುಗಳು ಅವರ ಜೊತೆಯಲ್ಲಿ ಪಕಳೆಗಳಾಗಿ ಗಾಳಿಯಲ್ಲಿ ಪಕ್ಷಿಗಳೋ ಅಥವಾ ಚಿಟ್ಟೆಗಳೋ ಆಗಿವೆ. ರಾಗವೊಂದು ತನ್ನ ತಾರಕಕ್ಕೇರಿ ವಾಪಸ್ಸು ಬರದೆ ಕಳೆದು ಹೋದಂತೆ ಅವರು ಆಗ ಅಲ್ಲಿ. ತಂತಿಯನ್ನು ಮೀಟುವ ಬೆರಳ ತಂತುವನ್ನು ಮೀರಿ ಅವರು ಈಗ ಹಗುರ. ಹಗೂರ. ಮತ್ತೆ ತಂತಿ ರಾಗವನ್ನು ಹುಡುಕಿ ತನ್ನೊಳಗೆ ಇಟ್ಟುಕೊಂಡಂತೆ ಪುನಃ ಅವರು ನೆಲದ ಮೇಲೆ. ಮುಳ್ಳ ಗುಲಾಬಿಗಳ ನಡುವೆ. ಗಾಳಿ ಸ್ತಬ್ಧ ಆಗ. ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡಂತೆ ಅವರ ಮುಖಗಳು. ಪೆಚ್ಚು. ಕಾಲ ಸ್ಥಿಲ್ಲಾಗಿದೆ ಆಗ. ಇಷ್ಟೊತ್ತಿನ ತನಕ ಆಗಿದ್ದಕ್ಕೂ ತನಗೂ ಏನಕೇನೂ ಸಂಬಂಧವಿಲ್ಲದಂತೆ!

'ಇವ್ರೊತ್ತು ಸಿಕ್ಕ ಬಡ್ಡಿ ಮಗ. ಹಡಬೆಗೆ ಹುಟ್ಟಿದವನು'. 'ಕುಲವನ್ನು ಹಾಳು ಮಾಡಿದವನು'. 'ಕುಲ ಕಂಟಕ'. 'ನಮ್ಮ ಕುಲದ ಹೆಣ್ಣಿನ ಮೈಯನ್ನು ಮುಟ್ಟಲು ಎಷ್ಟು ಧೈರ್ಯ'. 'ಹೇಲು ತಿನ್ನುವವುಗಳನ್ನ ತಿನ್ನೋ ಸೂಳೆಮಕ್ಕಳೆಲ್ಲ ಎಷ್ಟು ಮುಂದುವರೆದಿದ್ದಾರೆ'. 'ಇವರಿಗೆ ಕೊಟ್ಟ ಸಲಿಗೆ ಜಾಸ್ತಿಯಾತು'. 'ದೇವರು ಧರ್ಮ ಎಲ್ಲ ಹಾಳು'. 'ನಮ್ಮ ಜಾತ್ಯಸ್ಥರ ಮುಂದೆ ಹೆಂಗೆ ಮುಖ ತೋರಿಸೋದು'. 'ಮರ್ಯಾದೆ ಮುರಾಬಟ್ಟೆ ಇವಳ ದಿಸೆಯಲ್ಲಿ.' 'ಕೂಲಿಗೆಂತ ಬಂದು ನಮ್ಮ ಕುಲಕ್ಕೆ ಕೊಳ್ಳಿ ಇಟ್ಟ' 'ಎಷ್ಟು ದಿನದಿಂದ ಕಾಯಿತಿದ್ದ ವಿಸಪಾತಕ' 'ಮುಗಿಸಿ ಬಿಡನ್ರಲೆ ಇವ್ರೊತ್ತು. ಇಲ್ಲೇ ಸುಟ್ಟು ಹಾಕಾಣ'. 'ಒಂದು ಕುರುಹೂ ಸಿಗಬಾರದು'. 'ಏನಾರ ಹಂಗೆ ಮಾಡಿದ್ರೆ ನೇರ ಜೈಲು'. 'ನಿಮ್ಮಂತರು ಇರದರಿಂದಲೇ ನಮ್ಮ ಹೆಣ್ಣುಗಳೆಲ್ಲ ಹಿಂಗಾಗಿರೋದು'. 'ನಾ ಹೇಳ್ತಾ ಇರೋದ್ನ ವಸಿ ಯೋಚನೆ ಮಾಡ್ರಲೆ, ಅವಸರಕ್ಕೆ ಕೊಯ್ದ ಮೂಗು ಮತ್ತೆ ಬರುತ್ತಾ, ಹುಷಾರು. ಮುಳ್ಳ ಮುಳ್ಳಿಂದನೆ ತೆಗಿಬೇಕು'.

ಹೀಗೆ ಕಥೆಯಲ್ಲಿ ನಾಗರಿಕತೆಯ ಭಾಷೆಯನ್ನು ಮತ್ತು ಭಾಷ್ಯವನ್ನು ಗುಲಾಬಿ ಹೂವುಗಳು ತದೇಕಚಿತ್ತದಿಂದ ಆಲಿಸುತ್ತಿದ್ದವು. ಆ ಹೆಣ್ಣು ಮತ್ತು ಆ ಗಂಡು ನಾಗರಿಕತೆಯ ಪೂರ್ವಮಾನವರಾಗಿದ್ದರು. ತಂಬಿಕೊಂಡಿತ್ತು ಆಕಾಶ ಅವರನ್ನು. ನಾಗರಿಕತೆಯ ಭಾಷೆ ಮತ್ತು ಹುನ್ನಾರಗಳು ಮುಂದುವರೆದಿದ್ದವು.

ಇಬ್ಬರೂ ಸ್ನೇಹಿತರು ಪ್ರತಿಮೆಯ ಮುಂದೆ ಕುಳಿತು ಮಾತಾಡುತ್ತಿದ್ದರು. ಜಿಟಿಜಿಟಿ ನಿಂತಹಾಗೆ ಇತ್ತು. ಅವನು ಆ ಅಂದಿದ್ದಕ್ಕೆ ಇವನು ಹ್ಞೂ ಅನ್ನುತ್ತ, ಇವನು ಅದಲ್ಲ ಅಂದಿದ್ದಕ್ಕೆ ಅವನು ಮತ್ತೇನು ಅನ್ನುತ್ತ ಇವನು ಮೌನವಾದಾಗ ಅವನು ಮೌನವಾಗುತ್ತ ಇದ್ದರು. ಮಾತುಗಳು ಒಮ್ಮೊಮ್ಮೆ ಮಳೆಬಿದ್ದ ಒದ್ದೆಯ ನೆಲದಲ್ಲಿ ಬಿದ್ದು ಏಳದೆ ಅಲ್ಲೇ ಒದ್ದಾಡುತ್ತಿದ್ದವು. ಕರಿ ಮೂಗಿನವನ ಒಳಗೆ ಕಥೆ ಮಾಗಿಕಾಲದ ರಾತ್ರಿಗಳಲ್ಲಿ ಮಿಣುಕು ಹುಳುಗಳ ರೀತಿಯಲ್ಲಿ ಮಿಣುಕು ಮಿಣುಕು.

'ಕಥೆಯ ಮುಂದಿನ ಭಾಗವನ್ನು ನಾನು ಹೇಳುವೆನು ಕೇಳು' ಅವನ ಸ್ನೇಹಿತ ಅಂದ.

ಆ ಮಾತಿಗೆ ಅವಾಕ್ಕಾಗಿ, ಅರೆ ನಾನು ಊಹೆ ಮಾಡಿಕೊಂಡಿರುವ ಕಥೆಯನ್ನು ನೀನು ಹೇಗೆ ಅದು